‘ಯಾವುದೋ ಜನ್ಮದಲ್ಲಿ ಋಣ ತಿಂದಿದ್ರಿ ಅಂತ ಕಾಣುತ್ತೆ. ತೀರಿಸ್ತಿದೀವಿ ಅಂದ್ಕಳ್ಳೋದಪ್ಪಾ...’

‘ನಿನ್ನ ಮಗ ಹೀಗಾಗ್ತಾನೇಂತ ಅಂದ್ಕಂಡೇ ಇರ್ಲಿಲ್ಲ. ಲಕ್ಷಗಟ್ಲೆ ಸಂಬಳ ತರೋನಿಗೆ ಹೆಂಡ್ತೀನ ಅಂಕೇಲಿಟ್ಕೊಳ್ಳೋಕೆ ಹೇಳ್ಕೊಡ್ಬೇಕಾ? ಅವಳು ಹೇಳಿದ್ದಕ್ಕೆಲ್ಲಾ ಇವನ್ಯಾಕೆ ಕುಣೀಬೇಕು? ಸ್ವಂತ ಬುದ್ಧಿ ಚೂರಾದ್ರೂ ಬ್ಯಾಡ್ವಾ?’

‘ನಿಮಗ್ಗೊತ್ತಾಗಲ್ಲ ಬಿಡಿ, ಗಂಡುಮಕ್ಕಳ ಕಷ್ಟ’

‘ನಾನಾಗಿದ್ದಿದ್ರೆ ಅದರ ಕತೇನೇ ಬೇರೆ ಇರ್ತಿತ್ತು.’

‘ಅವನು ನೀವಲ್ವಲ್ಲ? ಮೆದುಗಸ್ಥ ಹುಡುಗ. ಮರ್ಯಾದೆಗೆ ಅಂಜ್ತಾನೆ ಕಣ್ರೇ. ಜಗಳ ಗಿಗಳ ಅಂದ್ರೆ ಮಾರು ದೂರ...’ ಅನ್ನುವಾಗ ವೆಂಕಟರಾಮುವಿನ ನೆನಪಾಗಿತ್ತು ಸೀತಾಲಕ್ಷ್ಮಿಗೆ.

‘ಆಗ್ಲಿ, ಹೆಂಡ್ತಿ ಮಾತೇ ಕೇಳ್ಕಂಡಿರ್ಲಿ. ಮರ್ಯಾದೆ ನಮಗೂ ಉಂಟು’.

‘ಅಂದ್ರೆ?’

‘ದುಡ್ಡಿದೆ ಕಣೇ, ಇಪ್ಪತ್ತು ಲಕ್ಷ. ಯಾವನ ಹಂಗೂ ಬೇಡ. ನಮ್ಮಷ್ಟಕ್ಕಿರೋಣ...’

‘ಮಾರಾಯ್ರಾ, ಊರು ಮನೆ ಬಿಟ್ಟು ಕಣ್ಣು ಕಾಣ್ದಿರೋ ಕಡೆ ಬಂದಿದ್ದಾಯ್ತು. ಮಗನ ಕಾಲ ಬುಡ ಸೇರ್ಕಂಡಿದ್ದಾಯ್ತು. ಏನಾಗುತ್ತೋ ಆಗ್ಲಿ ಅಂತ ಇಲ್ಲಿಗೆ ಕಚ್ಕಂಡಿರೋದಪ್ಪಾ. ವಯಸ್ಸಾದ ಕಾಲಕ್ಕೆ ನೋಡೋರೊಬ್ರು ಬ್ಯಾಡ್ವಾ? ಈಗ್ಲೇ ಕಣ್ಣು ಮಂಜುಮಂಜಾಗಿದೆ. ಕೈಕಾಲು ಹೇಳಿದ್ದು ಕೇಳಲ್ಲ ಅಂತಿವೆ. ನೀವು ಹೊಸಾ ರಾಗ ತೆಗೀಬೇಡಿ, ಕೈ ಮುಗೀತೀನಿ’

‘ಹಂಗಿದ್ರೆ ನೀನು ಮಗನ ಜೊತೇಲಿ ಬೆಚ್ಚಗಿದ್ಬಿಡು. ನನ್ನ ದಾರಿ ನಾನು ನೋಡ್ಕಂತೀನಿ. ನಾಳೆ ಏನಾಗುತ್ತೋ ಅನ್ನೋ ಹೆದರಿಕೇಲಿ ಈಗಿಂದ ಇದ್ದೂ ಸತ್ತ ಹಂಗಿರೋಕೆ ನನ್ಕೈಲಾಗಲ್ಲ. ಲಕ್ಷಗಟ್ಲೆ ದುಡ್ಡು ಹುಡಿ ಮಾಡಿ ಹುಟ್ಟಿದ ಹಬ್ಬ ಮಾಡಿದ್ರಲ್ಲ, ಅಪ್ಪಾ, ಅಮ್ಮಾ, ನಿಮಗೆ ಯಾರನ್ನಾರೂ ಕರೀಬೇಕು ಅನ್ಸಿದ್ರೆ ಕರೀರಿ ಅಂತ ಬಾಯಿಮಾತಿಗಾದ್ರೂ ಹೇಳಿದ್ರಾ? ನಮಗೂ ಬೇಕಾದೋರು ಅಂತ ಇರಲ್ವಾ? ವಯಸ್ಸಾದೋರು ಅಂದ್ರೆ ಲೆಕ್ಕಕ್ಕೇ ಇಲ್ಲ ಅನ್ನೋವಷ್ಟು ಸಸಾರಾನಾ? ಅವಳ ಅಪ್ಪನ ಮನೆಯೋರು ಮಾತ್ರಾ ಮನುಷ್ರಾ?’

ಗಂಡ ಇಷ್ಟೆಲ್ಲಾ ನಂಜನ್ನು ಹೊಟ್ಟೆಯೊಳಗೆ ಬಚ್ಚಿಟ್ಟುಕೊಂಡಿದ್ದಾರೆ ಎಂದು ಅವರ ಬಾಯಿಂದಲೇ ಕೇಳಿ ಸೀತಾಲಕ್ಷ್ಮಿಗೆ ದಿಗ್ಭ್ರಮೆ. ಈ ಮಟ್ಟಿಗೆ ಈ ಮನುಷ್ಯ ಹೊಂದಿಕೊಂಡಿರುವುದೇ ಹೆಚ್ಚು ಎಂದು ಅವಳಿಗೆ ಯಾವತ್ತಿನಿಂದಲೋ ಅನಿಸಿತ್ತು. ಮಗನಿಗೆ ಎಲ್ಲಾ ಗೊತ್ತಾಗುವುದಿಲ್ಲ ಅಂತೇನಲ್ಲ. ಅವನೇನು ಹೆಡ್ಡ ಅಲ್ಲ. ಹೆಂಡತಿ ಹೇಳಿದಂತೆ ನಡೆದುಕೊಳ್ಳದಿದ್ದರೆ ಪರಿಸ್ಥಿತಿ ಬಿಗಡಾಯಿಸುತ್ತದೆ ಎಂದು ಅವನಿಗೆ ಗೊತ್ತಿದೆ. ಎಲ್ಲಾ ಗೊತ್ತಿದ್ದೂ ಬಾಯಿಗೆ ಕಡುಬು ತುಂಬಿಕೊಂಡವನಂತೆ ತೆಪ್ಪಗಿದ್ದಾನೆ. ಮತ್ತೊಬ್ಬ ವೆಂಕಟರಾಮು ಆಗಿದ್ದಾನೆ. ಈಗ ನೋಡಿದರೆ ಗಂಡ ಮತ್ತೊಂದೇನೋ ವರಸೆ ತೆಗೆಯುತ್ತಿದ್ದಾರೆ.

‘ನೋಡಿ, ಈಗಾಗ್ಲೇ ಒಬ್ಬನ್ನ ಕಳ್ಕಂಡು ಕೂತಾಗಿದೆ. ಇನ್ನೊಬ್ಬನನ್ನೂ ಕಳ್ಕೊಳ್ಳೋಕೆ ನಾನು ತಯಾರಿಲ್ಲ. ಅವನ ಮಕ ನೋಡ್ಕಂಡು ರಾಮಾ, ಕೃಷ್ಣಾ ಅಂತ ಕಾಲ ಹಾಕ್ಬಿಡೋಣ...’

‘ಆಯ್ತು, ನಿನ್ನನ್ನ ಒತ್ತಾಯ ಮಾಡಲ್ಲ ನಾನು...’

‘ನೀವೇನು ಮಾಡ್ತೀರಿ?’

‘ವೃದ್ಧಾಶ್ರಮಗಳಿಗೆ ಬರಗಾಲಾನಾ? ನಮ್ಮಂತೋರು ಬೇಕಾದಷ್ಟು ಜನ ಇದಾರೆ...’ ಅಂದ ಶಿವರಾಮ.

‘ತಡೀರಿ, ಸ್ವಲ್ಪ ಯೋಚನೆ ಮಾಡೋಣ. ಧಡ್ ಅಂತ ಹೊಳೆಗೆ ಹಾರೋದು ಬೇಡ...’

‘ಯಾಕೆ ಹೆದರಿ ಸಾಯ್ತೀಯೇ? ಒಂದು ಮನೆ ಮಾಡ್ಕಂಡು ನಮ್ಮಷ್ಟಕ್ಕಿರೋಣ. ಒಬ್ರು ಹೋದ್ರೆ ಇರೋ ಮತ್ತೊಬ್ರು ವೃದ್ಧಾಶ್ರಮ ಸೇರ್ಕಂಡ್ರಾಯ್ತಪ್ಪಾ...’

‘ಹಂಗಂತೀರಾ?’ ಅನ್ನುವಾಗ ಸೀತಾಲಕ್ಷ್ಮಿಗೆ ಇದು ಇವತ್ತು, ನಿನ್ನೆಯ ತೀರ್ಮಾನದ ಫಲಶ್ರುತಿ ಅಲ್ಲ, ಯಾವಾಗಿನಿಂದಲೋ ಯೋಚಿಸಿ, ಚಿಂತಿಸಿ ತೆಗೆದುಕೊಂಡ ತೀರ್ಮಾನ ಅನ್ನಿಸಿಯೇ ಅನ್ನಿಸಿತು.

‘ಊರು ಮನೆಯೋರಿಗೆ ಸುದ್ದಿ ಗೊತ್ತಾದ್ರೆ ನಗ್ತಾರೆ ಅಷ್ಟೇ. ಈ ಭಟ್ಟರ ಬೇಳೇಕಾಳು ಯಾರ ಮನೇಲೂ ಬೇಯಲ್ಲ, ಮಗನ್ನೇ ನಿಷ್ಠುರ ಮಾಡ್ಕಂತು ಪ್ರಾಣಿ ಅಂತ ಅಂದ್ಕಂತಾರೆ...’

‘ಇಂತಹ ತೀರ್ಮಾನ ತಗೊಳ್ಳೋಕೂ ಧೈರ್ಯ ಬೇಕು ಕಣೇ. ದನ, ಎಮ್ಮೆ ಕಟ್ಟೋ ಕೊಟ್ಟಿಗೇಗಿಂತಾ ಅತ್ತತ್ತ ಆಗಿರೋ ಜಾಗದಲ್ಲಿ ಅಪ್ಪ, ಅಮ್ಮನ್ನ ಕೂಡಿಟ್ಟಿರೋರನ್ನ ನೋಡಿಲ್ವಾ ನೀನು? ‘ಸತ್ತ ಸಾವಲ್ಲ, ಇದ್ದ ಬದುಕಲ್ಲ’ ಅನ್ನೋಕಿಂತ ನೆಮ್ಮದಿಯಾಗಿ ನಮ್ಮ ಅನ್ನ ನಾವು ತಿಂದ್ಕಂಡಿರೋಣ. ಮುಂದಿಂದು ಮುಂದೆ...’

‘ಹತ್ರದಲ್ಲೇ ಬೇರೆ ಮನೆ ಮಾಡ್ಕಂಡಿದ್ರೆ ಮಗನೂ ಬಂದು ಹೋಗಿ ಮಾಡ್ತಿರ್ತಾನೆ. ಮೊಮ್ಮಗನ ಮುಖನೂ ನೋಡ್ತಿರಬಹ್ದು, ಯೋಗ ಇದ್ರೆ’

‘ಇನ್ನೂ ಅದದೇ ಹಲುಬ್ತಿರ್ಬೇಡ. ಈ ಬೆಂಗಳೂರು ಪೇಟೆ ಸಾವಾಸ ಬೇಡ. ಇದು ನಮ್ಮಂತೋರಿಗೆ ಗಿಟ್ಟಲ್ಲ. ಬಡ್ಡಿ ದುಡ್ಡು ಮನೆ ಬಾಡಿಗೆಗೆ ಕೊಡೋಕೂ ಸಾಕಾಗಲ್ಲ...’

‘ಮತ್ತೆ?’

‘ಊರ ಕಡೆ ಹೋಗ್ಬಿಡೋದು’

‘ಆಂ’

‘ಬಿಟ್ಟು ಬಂದ ಹಳ್ಳಿಗೆ ಅಂತಲ್ಲ ಮಾರಾಯ್ತೀ. ಅಲ್ಲಿಗೆ ಹತ್ತಿರದ ಪೇಟೆಗೆ ಅಂತ ಹೇಳ್ತಿರೋದು. ಗುರುತಿನ ಜನ ಇರ್ತಾರೆ. ವ್ಯಾಪಾರ, ಗೀಪಾರ, ಸಿನಿಮಾ, ಗಿನಿಮಾ ಅಂತ ಊರಿಂದ ಬಂದು ಹೋಗೋರು ಸಿಗ್ತಿರ್ತಾರೆ. ಹೊಸ ಜಾಗಕ್ಕೆ ಬಂದು ಪರದೇಶಿ ಆಗಿದೀವಿ ಅನ್ನಿಸಲ್ಲ. ಸಣ್ಣದೊಂದು ಮನೆ ಮಾಡ್ಕಂಡು ಇದ್ಬಿಡೋಣ. ಇಲ್ಲಿನ ಅರ್ಧದಷ್ಟು ಖರ್ಚಲ್ಲಿ ಜೀವನ ಮಾಡ್ಬಹ್ದು...’

‘ಸೇಡು ಗೀಡು ಅಂತ ಮತ್ತೆ ಶುರು ಹಚ್ಕಂಡ್ರೆ ನಾನೆಲ್ಲಿಗೆ ಸಾಯ್ಲಿ? ನಿಮ್ಮ ತಮ್ಮ, ತಮ್ಮನ ಮಕ್ಕಳು ಯಾರಾರೂ ಎದುರಿಗೆ ಸಿಕ್ಕೋದು, ನಿಮ್ಮ ಮೇಲೆ ವೀರಭದ್ರನ ಆವಾಹನೆಯಾಗೋದು...’

‘ಅದೆಲ್ಲಾ ಆ ಕಾಲಕ್ಕೆ. ಈಗ ಹಣ್ಣಾಗಿದೀನಿ ಮಾರಾಯ್ತೀ. ನಮ್ಮಷ್ಟಕ್ಕೆ ನಾವು ಮರ್ಯಾದೆಯಿಂದ ಬದುಕು ಮಾಡಿದ್ರೆ ಸಾಕಾಗಿದೆ ನಂಗೆ. ಎದುರಿಗೆ ಕಂಡ್ರೂ ಗುರ್ತಿಲ್ದಿರೋರು ಅನ್ನೋ ಹಾಗೆ ತಲೆ ಬಗ್ಗಿಸ್ಕಂಡು ನಡೆದ್ರಾಯ್ತಪ್ಪಾ. ದಿನಾ ಸಿಗಲ್ವಲ್ಲ?’

‘ನೀವಾ ಈ ಮಾತು ಹೇಳ್ತಿರೋದು?’ ಎನ್ನುವಂತೆ ಕಣ್ಣರಳಿಸಿ ಶಿವರಾಮನ ಮಕ ನೋಡಿದಳು ಸೀತಾಲಕ್ಷ್ಮಿ. ಬಾಯಿಮಾತಿಗಲ್ಲ ಹೇಳಿದ್ದು. ಶಿವರಾಮ ಹಣ್ಣಾಗಿರುವುದು ಹೌದೇ ಹೌದು. ಮನುಷ್ಯ ಮೊದಲಿಂದ ಕಡೇತನಕ ಒಂದೇ ರೀತಿ ಇರುವುದಕ್ಕಾಗುತ್ತದೆಯಾ? ಗುದ್ದಿ ಹಣ್ಣು ಮಾಡುತ್ತದೆ ಜೀವನ. ‘ಪಾಪ...’ ಅನ್ನುವಂತಹ ಭಾವವೊಂದು ಸೀತಾಲಕ್ಷ್ಮಿಯ ಮನಸ್ಸಿನಲ್ಲಿ ಸುಳಿದು ಹೋಯ್ತು. ಈ ಬುದ್ಧಿ ಮೊದಲೇ ಇದ್ದಿದ್ದರೆ ಊರುಮನೆಯಲ್ಲಿ ಮಹಾರಾಜನ ಹಾಗಿರಬಹುದಿತ್ತಾ ಅಂತಲೂ ಅನಿಸಿತು. ಕೆಟ್ಟ ಮೇಲೆ ತಾನೇ ಬುದ್ಧಿ ಬರುವುದು?

***

ಮರಳಿ ಊರಿನ ಕಡೆ ಹೋಗುವ ಅಪ್ಪನ ಮಾತು ಕೇಳಿ ಕಾಸಗಲ ಆಗಿತ್ತು ಪ್ರಸನ್ನನ ಮುಖ.

‘ಯಾರಿದಾರೇಂತ ಅಲ್ಲಿಗೆ ಹೋಗ್ಬೇಕು ಅಪ್ಪಾ? ಈ ವಯಸ್ಸಲ್ಲಿ ನಿಮ್ಮನ್ನ ನೋಡ್ಕಳ್ಳೊರೊಬ್ರು ಬೇಡ್ವಾ?’ ವಿಷಾದದಿಂದ ಕೇಳಿದ್ದ.

‘ಎಲ್ರನ್ನೂ ನೋಡ್ಕಳ್ಳೋವ್ನು ಅವ್ನು, ಮೇಲಿರೋನು...’ ಬಲಗೈಯೊಡನೆ ಮುಖವನ್ನೂ ಮೇಲೆತ್ತಿ ಆಕಾಶದ ಕಡೆ ಕೈ ಮಾಡಿದ್ದ ಶಿವರಾಮ.

‘ಅಷ್ಟು ಕಷ್ಟ ಆಗ್ತಿದ್ಯಾ ನಿಮಗೆ, ನಮ್ಮ ಸಾವಾಸಾನೇ ಬೇಡ ಅನ್ನೋವಷ್ಟು?’

‘ಹಾಗೆಲ್ಲಿ ಹೇಳಿದ್ವಿ? ನೀವು ಈಗಿನ ಕಾಲದೋರು. ಲಕ್ಷಗಟ್ಟಲೆ ದುಡಿಮೆ ಇರೋರು. ನೀವು ಬದುಕು ಮಾಡೋ ರೀತಿಗೂ, ನಾವು ಯೋಚನೆ ಮಾಡೋ ಕ್ರಮಕ್ಕೂ ಹೊಂದಿಕೆ ಆಗಲ್ಲ, ಅಷ್ಟೇ...’

‘ತಪ್ಪು ತಿಳಿವಳಿಕೆ ಆಗಿಬರ್ದೋದು ಅಪ್ಪಾ, ಮನಸ್ಸು ಮಾಡಿದ್ರೆ ಹೊಂದಾಣಿಕೆ ಮಾಡ್ಕಂಡು ಬದುಕೋದು ಕಷ್ಟ ಏನಲ್ಲ. ಇನ್ನೊಂದ್ಸಲ ಹೇಳ್ತೀನಿ, ಇಲ್ಲಾಗ್ತಿರೋದು ಬರೀ ತಪ್ಪು ತಿಳಿವಳಿಕೆ, ಮನಸ್ತಾಪ ಅಲ್ಲ. ಇಷ್ಟಕ್ಕೆಲ್ಲಾ ಏನೇನೋ ಅರ್ಥ ಕಟ್ಟೋಕೆ ಹೋಗ್ಬೇಡಿ...’

‘ಇಲ್ಲ ಮಾರಾಯಾ. ಒಟ್ನಲ್ಲಿ ನೀವು ಸುಖವಾಗಿದ್ರೆ ಸೈ. ಅದೇ ನಮಗೆ ಸಂತೋಷ’.

‘ಹಂಗಿದ್ರೆ ಮನೆ ಬಿಟ್ಟು ಬೇರೆ ಕಡೆ ಹೋಗೋ ವಿಚಾರ ಮರೆತ್ಬಿಡಿ...’

‘ನಾವು ನಿರ್ಧಾರ ಮಾಡಿದೀವಿ...’

‘ತೀರಾ ಆಗೋದೇ ಇಲ್ಲ ಅಂತಾದ್ರೆ ಇಲ್ಲೇ ಬೇರೆ ಮನೆ ನೋಡೋಣ. ಸಾಧ್ಯ ಆದ್ರೆ ಕೊಂಡ್ಕಂಡೇ ಬಿಡೋಣ. ಈಗ ವಯಸ್ಸಾದೋರು ಸೈತಾ ನಮ್ಮಷ್ಟಕ್ಕೆ ನಾವಿರ್ತೀವಿ ಅನ್ನೋ ಕಾಲ ಬಂದ್ಬಿಟ್ಟಿದೆ...’

‘ಬ್ಯಾಡ ಅಂದ್ನಲ್ಲ. ಯಾಕೋ ಊರ ಕಡೆ ಮನಸ್ಸು ಎಳೀತಿದೆ. ಅಲ್ಲಾದ್ರೆ ನಮ್ಕೈಲಿರೋ ದುಡ್ಡು ನಮಗೆ ಸಾಕು ಅಂದ್ಕಂಡಿದೀನಿ...’

‘ಬೇಡ ಅಪ್ಪಾ, ಮತ್ತೆ ಇಲ್ಲದ ರಗಳೆ ಶುರುವಾಗುತ್ತೆ...’

‘ಹಂಗೇನಾಗಲ್ಲ ಅಂತ ನಿಮ್ಮ ಅಮ್ಮಂಗೆ ಮಾತು ಕೊಟ್ಟಿದೀನಿ..’

(ಸಶೇಷ)